Regd No. M 1299 SATYAVADI Founded 1927

ಸತ್ಯವಾದಿ

ಸಂಪುಟ 26 ಸಂಚಿಕೆ 110] ಗುರುವಾರ 25—2—1943 [ಬಿಡಿಪ್ರತಿ 3 ಪೈ

ಯುದ್ಧವಾರ್ತೆ

ಗೌಡಾಲ್ ಕೆನಾರ್ ಬಳಿ ೫೫ ಜಪಾನಿ ವಿಮಾನಗಳು ನಾಶಮಾಡಲ್ಪಟ್ಟವು.

ಟ್ಯುನಿಷಿಯಾದಲ್ಲಿನ ಅಕ್ಸಿಸ್ ಸೈನ್ಯಕ್ಕೆ ರೊಮೆಲ್ ಮುಖ್ಯ ಸೇನಾ ನಾಯಕನಾಗಿ ನಿಯಮಿಸಲಾಗುವುದೆಂದು ಸ್ವಾಕ್ಕೋಂ ಪತ್ರಿಕೆಯೊಂದಕ್ಕೆ ಬರ್ಲಿನ್ ವಾರ್ತಾಧಿಕಾರಿಯು ಬರೆದಿರುತ್ತಾನೆ ಟ್ಯುನಿಷಿಯಾದಲ್ಲಿ ಹೊಸ ಮಿಲಿಟರಿ ಮುಖಂಡರು ಇರುವುದಾಗಿಯೂ ವರ್ತಮಾನವಿದೆ.

ರಷ್ಯಾದಲ್ಲಿನ ಇಟಲಿ ವಿಮಾನ ಪಡೆಯ ಮುಖ್ಯಾಧಿಕಾರಿಯು ಪತ್ತೆಯಿಲ್ಲವೆಂದು ರೋಂ ಸುದ್ದಿ.

ಅಸ್ಸಾಮಿನ ಒಂದು ಅಮೇರಿಕಾ ವಿಮಾನ ನಿಲ್ದಾಣದ ಮೇಲೆ ಜಪಾನಿ ವಿಮಾನಗಳು ಧಾಳಿ ಮಾಡಿದವು.

ಒಮ್ಮೊಮ್ಮೆ ಆರ್.ಎ.ಎಫ್. ನವರು ದಾಳಿ ನಡೆಸಿದರು

ಟ್ಯುನಿಷಿಯಾದಲ್ಲಿ ಟ್ಯಾಂಕ್ ಯುದ್ಧ ನಡೆಯುತ್ತಿದೆ.

ಯುಕ್ರೇನಿನ ರೈಲ್ವೆ ಜಂಕ್ಷನ್ ಸುಮಿ ಎಂಬುವುದು ರಷ್ಯನರ ವಶವಾಗಿದೆ.

ಬ್ರಿಟಿಷ್ ಮುಖ್ಯ ಮಂತ್ರಿಗಳು ಮುಖಂಡರ ವಿನಂತಿಯನ್ನು ನಿರಾಕರಿಸಿದರು

ಮಹಾತ್ಮ ಗಾಂಧಿಯವರು ಕೂಡಲೇ ಬಿಡುಗಡೆ ಮಾಡಲ್ಪಡಬೇಕೆಂದು ದೆಲ್ಲಿಯಿಂದ ಮುಖಂಡರು ಕಳುಹಿಸಿದ ಕೇಬಲ್ ವಿನಂತಿಯನ್ನು ಮಿ|| ಚರ್ಚಿಲರು ನಿರಾಕರಿಸಿರುವರು. ಇಂಡಿಯಾ ಸರ್ಕಾರವ ತೀರ್ಮಾನವನ್ನು ಎತ್ತಿಹಿಡಿದಿರುವರು.

ಕಲ್ಕತ್ತಾ ಟಲಿಫೋನ್

ಈಗ ಒಂಗಾಳಾ ಟಲಿಫೋನ್ ಕಂಪೆನಿಯ ಪ್ರೊದೇಷನ್ನಿನ ಅಡಳಿತದಲ್ಲಿರುವ ಕಲ್ಕತ್ತಾ ಟಲಿಫೋನ್ ಮೇಲಿನ ಅಧಿಕಾರವನ್ನು ಏಪ್ರಿಲ್ ೧ ರಿಂದ ಇಂಡಿಯಾ ಸರ್ಕಾರ ವಹಿಸಿಕೊಳ್ಳುವುದು.

ಫ್ಯಾಕ್ಟರಿಗೆ ಬೆಂಕಿ

ಒಂಗಾಳಾದಲ್ಲಿ ಒಂದು ಕಡಲೇಕಾಯಿ ಫ್ಯಾಕ್ಟರಿಯು ಅಗ್ನಿನಾರಾಯಣನಿಗೆ ಸಮರ್ಪಕವಾಯಿತು

ಚರಿತಾರ್ಥ ಸ್ಟಾಲಿಗ್ರಾಡ್

ಸ್ಟಾಲಿಗ್ರಾಡ್ ರಕ್ಷಣೆಯ ಬಗ್ಗೆ ಸಂಪೂರ್ಣ ವಿಷಯಗಳನ್ನೊಳಗೊಂಡ ಒಂದು ಮ್ಯೂಜಿಯಂ ಅಲ್ಲಿ ಸ್ಥಾಪಿಸಲಾಗುವುದೆಂದು ಮಾಸ್ಕೊ ಸ್ಪುಟ್ನಿಕ್.

ವೇಶ್ಯಾ ಗೃಹಗಳಿಗೆ ಸೈನಿಕರ ಪ್ರವೇಶವಿಲ್ಲ

ಕಲ್ಕತ್ತಾದ ವೇಶ್ಯಾ ಗೃಹಗಳಿಗೆ ಸೈನಿಕರಿಗೆ ಪ್ರವೇಶವಿಲ್ಲವೆಂದು ದೆಲ್ಲಿ ಅಸೆಂಬ್ಲಿಯಲ್ಲಿ ಯುದ್ಧ ಮಂತ್ರಿಗಳು ತಿಳಿಸಿದರು. ವೇಶ್ಯಾ ಗೃಹಗಳಿರುವ ಭಾಗಗಳಿಗೆ ಸೈನಿಕರು ಹೋಗದಂತೆ ಆಜ್ಞಾಪಿಸಿರುವರಂತೆ.

ಮಹಾತ್ಮ ಗಾಂಧಿಯವರು

ಗಾಂಧಿಯವರ ದೇಹಸ್ಥಿತಿಯು ಸ್ವಲ್ಪ ಉತ್ತಮಗೊಂಡಿರುವುದೆಂದೂ, ರಕ್ತದಲ್ಲಿ ಮೂತ್ರ ಸಂಬಂಧ ದೋಷ ತಗ್ಗಿರುವುದೆಂದೂ ಶಕ್ತಿಯು ಮತ್ತೇನೂ ಹೆಚ್ಚಾಗಿ ಕುಗ್ಗಿಲ್ಲವೆಂದೂ ತಿಳಿಯ ಬಂದಿದೆ.

೦ ೦ ೦

ಹತ್ತಿರ ಇರುವ ಡಾಕ್ಟರುಗಳು ಗಾಂಧೀಜಿಯವರು ಹೆಚ್ಚು ಆಯಾಸಪಟ್ಟುಕೊಳ್ಳಲು ಅವಕಾಶ ಕೊಡದಂತೆ ನೋಡಿಕೊಳ್ಳುತ್ತಿದ್ದಾರೆ. ಫ್ರೆಂಡ್ಸ್ ಆಂಬ್ಯುಲೆನ್ಸ್ ಯುನಿಟ್ಟಿನ ಮಿ|| ಆಲೆಕ್ಸಾಂಡರ್‌ರವರು ಗಾಂಧೀಜಿಯವರೊಡನೆ ಸಂಭಾಷಣೆ ನಡೆಸಿದರು.

೦ ೦ ೦

ಗಾಂಧಿಯವರು ಬಿಡುಗಡೆ ಮಾಡಲ್ಪಡಬೇಕೆಂದು ಮದ್ರಾಸ್ ಪ್ರಜೆಗಳು ಸರ್ಕಾರವನ್ನು ಕೋರಿದ್ದಾರೆ.

೦ ೦ ೦

ಬ್ರಿಟನ್ನಿನಲ್ಲಿ ಗಾಂಧೀಜಿ ಉಪವಾಸವು ಕಳವಳವನ್ನುಂಟುಮಾಡಿದೆ. ಅವರ ಬಿಡುಗಡೆಯಾಗಬೇಕೆಂದು ಅಭಿಪ್ರಾಯ ಜೋರಾಗಿದೆ.

ಗಾಂಧೀಜಿಯವರು ದಸ್ತಗಿರಿಯಾಗಿ ೧೫ ದಿನಗಳನಂತರ ಅವರಿಗೆ ಬೇಕಾದ ಪತ್ರಿಕೆಗಳು ಕೊಡಲಾಗುವುದೆಂದು ತಿಳಿಸಲಾಯಿತೆಂದೂ, ಅವರು ಯಾವ ಪತ್ರಿಕೆ ಬೇಕೆಂದರೋ ಅದು ಸರ್ಕಾರಕ್ಕೆ ಗೊತ್ತಿಲ್ಲವೆಂದೂ, ಅವರು ಕೇಳಿದ ಪತ್ರಿಕೆಗಳು ಅವರಿಗೆ ತಲಪುತ್ತಿದೆಯೆಂದೇ ತಮ್ಮ ಊಹೆಯೆಂದು ದೆಲ್ಲಿ ಅಸೆಂಬ್ಲಿಯಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡಲಾಯಿತು.

ಲಂಡನ್ ಈವಿನಿಂಗ್ ಸ್ಟ್ಯಾಂಡರ್ಡ್ ಪತ್ರಿಕೆಗೆ ಬರೆಯುತ್ತಾ, ಭಾರತದ ಹಿಂದಿನ ಬ್ರಾಬೋರ್ನ್ ಕಂಟ್ರೋಲರಾಗಿದ್ದ ಮಿ|| ಫೀಲ್ಡನ್ನರು ಗಲಾಟೆಗಳ ವಿಷಯವು ವಿಚಾರಣೆ ಸಮಿತಿ ಮೂಲಕ ನ್ಯಾಯಸ್ಥೆಮಾಡುವುದು ಉತ್ತಮವೆಂದು ಅಭಿಪ್ರಾಯಪಟ್ಟಿದ್ದಾರೆ.

ಮಹಾತ್ಮರ ಆಯುರಾರೋಗ್ಯದ ಬಗ್ಗೆ ಪ್ರಾರ್ಥಿಸಲು ತಿರುಚನಾಪಳ್ಳಿ ನ್ಯಾಷನಲ್ ಕಾಲೇಜ್ ವಿದ್ಯಾರ್ಥಿಗಳಿಗೆ ರಜೆ ಕೊಡಲಾಗಿದ್ದಿತು.

ಸಿಳೋನಿನ ನ್ಯಾಯವಿಧಾಯಕ ಸಭೆಯು ಮಿ|| ಗಾಂಧಿಯವರು ಕೂಡಲೆ ಬಿಡುಗಡೆ ಮಾಡಲ್ಪಡಬೇಕೆಂಬ ನಿರ್ಣಯವನ್ನು ಬಹುಸಂಖ್ಯಾಧಿಕ್ಯದಿಂದ ವಿಟೂರ್ಮಾಡಿದೆ.

ವಾಲ್ಟಾಟಿನಲ್ಲಿ ಅನೇಕ ಮಂದಿ ಮುಖ್ಯ ವಕೀಲರೂ ೨೧ ನೇ ತಾ|| ಮಹಾತ್ಮಾಜಿಯವರ ಉಪವಾಸದ ಸಹಾನುಭೂತಿ ಒಗ್ಗೆ ತಾವು ಉಪವಾಸವನ್ನಾಚರಿಸಿದರು.

ಗಾಂಧಿಯವರ ಉಪವಾಸದ ನಿಮಿತ್ತ, ಕೊಚಿನ್ನಿನಲ್ಲಿ 22 ನೇ ತಾ|| ಹರತಾಳ ಆಚರಿಸಲಾಯಿತು.

ಅಮೆರಿಕಾದವರನೇಕರು ಅಮೆರಿಕದ ಅಧ್ಯಕ್ಷರಾದ ಮಿ|| ರೂಸ್ವೆಲ್ಟರಿಗೆ ತಂತಿ ಕಳುಹಿಸಿ, ಗಾಂಧಿಯವರ ಬಿಡುಗಡೆಗೂ ಮತ್ತು ಭಾರತದ ಒಕ್ಕಟ್ಟು ಪರಿಹಾರದ ಒಗ್ಗೆ ನಡುನಿಲಿಕೆ ನಡೆಸಲು, ತಮ್ಮ ಅಧಿಕಾರದ ಶಕ್ತಿಯನ್ನು ಉಪಯೋಗಿಸಬೇಕೆಂದು ಕೋರಿದ್ದಾರೆ.

ಮಿತ್ರಮಂಡಲಿಯವರ ಕಾರ್ಯಾಚರಣೆಯನ್ನು ಅಡ್ಡಗಟ್ಟಲು ಬಂದಿದ್ದ 5 ಜಪಾನಿ ಟಾರ್ಪೆಡೋ ವಿಮಾನಗಳು ಗೌಡಾಲ್ ಕನಾಲಿಗೆ ದಕ್ಷಿಣದಲ್ಲಿ ಹೊಡೆದುಳುಳಿಸಲಾಯಿತು.

೦ ೦ ೦

ಕ್ವಾಜ್ವಾಟ್ಜಿನಲ್ಲಿ ಚೀನೀಯರು ವಿಜಯಗಳಿಸಿದ್ದಾರೆ. ಜಪಾನಿಯರು ಹಳೆ ಸಂಪಿಗೆ ಕಡೆ ವಾಪಸಾಗುತ್ತಿದ್ದಾರೆ.

ಆಕ್ಸಿಸ್ಸರಿಗೆ ಫಿನ್ಲೆಂಡಿನಿಂದ ಸಹಾಯ ದೊರೆಯುವುದಿಲ್ಲ

ಇನ್ನು ಮುಂದೆ ಆಕ್ಸಿಸ್ಸರಿಗೆ ಫಿನ್ಲೆಂಡಿನ್ನ ಸಹಾಯ ದೊರೆಯುವುದಿಲ್ಲವೆಂದು ಹೇಳಲಾಗಿದೆ.

ದೆಲ್ಲಿಯಲ್ಲಿ ಮೆರವಣಿಗೆ ನಡೆಸುತ್ತಿದ್ದ ಆವಾದನೆ ಮೇಲೆ ಇಬ್ಬರು ದಸ್ತಗಿರಿ ಮಾಡಲ್ಪಟ್ಟರುವರು.

ಯುದ್ಧಾನಂತರ ಪ್ರಪಂಚದ ಆಹಾರ ಸ್ಥಿತಿಗತಿ ನಿರ್ಣಯ ಮಾಡಲು ಕೂಡಲೇ ಸಂಯುಕ್ತ ರಾಷ್ಟ್ರಗಳ ಸಮ್ಮೇಳನ ನಡೆಸಲಾಗುವುದೆಂದು ಮಿ|| ರೂಸ್ವೆಲ್ಟರು ಹೇಳಿದ್ದಾರೆ.

ಹೆಚ್ಚು ಮಕ್ಕಳು ಹುಟ್ಟಿದೆ

1942 ರಲ್ಲಿ ಅಮೆರಿಕಾದಲ್ಲಿ ಮೂರು ಮಿಲಿಯನ್ ಮಕ್ಕಳು ಹೆಚ್ಚಿಹುಟ್ಟಿರುವವೆಂದೂ ಅಮೆರಿಕಾ ಚರಿತ್ರೆಯಲ್ಲೆ ಇಷ್ಟು ಮಕ್ಕಳು ಯಾವ ವರ್ಷದಲ್ಲೂ ಹುಟ್ಟಿಲ್ಲವೆಂದು ವಾಷಿಂಗ್ಟನ್ ಪ್ರಕಟನೆ.

ಭಂಗಾರ ಬೆಳ್ಳಿ ಧಾರಣೆ

ಬಂಗಾರ	ತೋಲ	ರೂ. 66—12—0
ಬೆಳ್ಳಿ	,,	1—4—6

ವಿವಿಧ ವರ್ತಮಾನ

ಇಸ್ಸೂರು ಖೂನಿ ಪ್ರಕರಣದಲ್ಲಿ ಮರಣದಂಡನೆ ವಿಧಿಸಲ್ಪಟ್ಟಿರುವವನಿಗೆ ಜೀವ ಭಿಕ್ಷೆ ನೀಡಬೇಕೆಂದು ಶ್ರೀಮತಿ ಮಹಾರಾಜರವರನ್ನು ವಿನಂತಿಸಿ ಬೆಂಗಳೂರಿನ ೧೦೦೦ ಮಂದಿ ರುಜು ಮಾಡಿರುವ ವಿಜ್ಞಾಪನೆ ಪತ್ರ ಕಳುಹಿಸಲಾಗಿದೆ.

ಡೆಲ್ಲಿ ಸೆಂಟ್ರಲ್ ಅಸೆಂಬ್ಲಿಯಲ್ಲಿ ವೇಜ ರ್ ಜನರಲ್ ಪ್ರಸ್ತಾವನೆ ಕೊಟ್ಟ ಹೇಳಿಕೆಯಲ್ಲಿ, ಆಹಾರ ಸಂಬಂಧ ಸರ್ಕಾರಿ ನೀತಿ, ಸ್ಟಾಂಡರ್ಡ್ ಬಟ್ಟೆ, ಚಿಲ್ಲರೆ ನಾಣ್ಯ ಶೇಖರಣೆಗೆ ತಿಳಿಸಿ ಮುಂತಾದ ವು ಒಳಗೊಂಡಿದೆ.

ಮೂರನೆಯ ಮಾರ್ಕೆಟ್ಟು ೧೯ ನೇ ತಾ|| ನ ದಿವಸ ಜನರಿಂದ ಲೂಟಿ ಮಾಡಲ್ಪಟ್ಟಿತು. ಲೂಟಿಯು ಕೆಲವು ಗಂಟೆಗಳ ಕಾಲ ನಡೆದು ಅಲ್ಲಿದ್ದ ಭತ್ತ, ಅಕ್ಕಿ, ಒಟ್ಟೆ ಒರೆ, ತರ್ಕಾರಿ, ಮಿಠಾಯಿ ಮುಂತಾದ ವಲ್ಲಾ ಲೂಟಿ ಮಾಡಲಾಗಿದೆ. ಇವೆಲ್ಲಾ ಸಾವಿರಾರು ರೂಪಾಯಿ ಬಾಳತಕ್ಕವು.

ಜನವರಿ ೧೮ ರಲ್ಲಿ ದಕ್ಷಿಣ ಆಟ್ಲಾಂಟಿಕ್‌ನಲ್ಲಿ ಹಾರಾಡಲು ಹೋದ ೨೫ ಮಂದಿ ಅಮೇರಿಕಾ ಮತ್ತು ಬ್ರಿಟಿಷ್ ವಿಮಾನ ದಳದವರನ್ನೊಳಗೊಂಡ ಒಂದು ವಿಮಾನವು ಪತ್ತೆಯಿಲ್ಲವೆಂದೂ ಅಮೆರಿಕಾ ಯುದ್ಧ ಇಲಾಖೆಯವರು ಪ್ರಕಟಿಸಿರುವರು.

ಆನಾರೋಗ್ಯದಿಂದಿರುವ ವಿ|| ಜೆರ್ಜಿಲ್‌ರವರು ಈಗ ಗುಣ ಮುಖವಾಗುತ್ತಿರುತ್ತಾರೆ. ನಿನ್ನೆ ಹಿಡಿದ ಜ್ವರ ಇಳಿಮುಖವಾಯಿತು.

೦ ೦ ೦

ಯೂನಿಕೆ ಪ್ರಾಂತದಲ್ಲಿ ಜಪಾನರು ಸಾಲಮೆ ನದಿಯನ್ನು ದಾಟಲು ಸಾಧ್ಯವಾಗಲಿಲ್ಲ.

೦ ೦ ೦

ರಷ್ಯಾದವರು ತನ್ನ ಮುಂದೋಟವನ್ನು ಸಾಗಿಸುತ್ತಿದ್ದಾರೆ. ಇದನ್ನು ತಡೆಯಲು ಜರ್ಮನರು ೨೦ ಡಿವಿಜ್ ಸೈನ್ಯ ಕಳಿಸಿರುತ್ತಾರೆ

೦ ೦ ೦

ಅಹಮ್ಮದಾಬಾದಿನಲ್ಲಿ ೫೦ ವಿದ್ಯಾರ್ಥಿಗಳು ಒಬ್ಬ ವೇಶೀಸಿನವನನ್ನು ಹೊಡೆದದ್ದರಿಂದ ಅವನನ್ನು ಆಸ್ಪತ್ರೆಗೆ ಸಾಗಿಸಿದರು. ಸೋಡಾಸಲ್ಫು ಸಭೆ ನಡೆಸಬೇಕೆಂದಿದ್ದರಿಂದಲೂ, ಆಕ್ಷೇಪಕಾರಕವಾದ ಸ್ವಪತ್ರಿಕೆ ಇಟ್ಟುಕೊಂಡಿದ್ದರಿಂದ ೨೨ ಜನರಿಗೆ ತಲಾ ೬ ತಿಂಗಳು ಕಠಿಣ ಸಜೆ ವಿಧಿಸಲ್ಪಟ್ಟಿತು. ಕರಾಚಿಯಲ್ಲಿ ಇಬ್ಬರಿಗೆ ತಲಾ ಮೂರು ತಿಂಗಳು ಕಠಿಣ ಸಜೆವಾಯಿತು. ಇವರಲ್ಲಿ ಆಕ್ಷೇಪಣೀಯ ಕಾಗದಗಳಿದ್ದವು. ಇದೇ ಕಾರಣಕ್ಕಾಗಿ 18 ತಿಂಗಳ ಕಠಿಣ ಸಜೆ ವಿಧಿಸಿದರು.

ಬೊಂಬಾಯಿನ ಕಂತೀ ಇಲಾಖೆಯವರು ಈಗ ಪ್ರಯಾಣಾಬಾದಿಗೆ ತಡೆತಿ ವರ್ತಮಾನ ಸರಿಯಾಗಿ ಹೆಲ್ಲಗುವುದೆಂದೂ ಮದಶ್ಶಿಸ್ ಮತ್ತು ಅದರ ಸುತ್ತಮುತ್ತಲು ಸ್ಥಳಗಳಿಗೆ ಲೈನಿನಲ್ಲಿ ಇನ್ನು ಸ್ವಲ್ಪ ತೊಂದರೆ ಗ್ಗರಿವುದರಿಂದ ಹೆಚ್ಚು ಕಾಲವಿಳಂಬವಾಗುವುದೆಂದೂ ಪ್ರಕಟಿಸಿರುತ್ತಾರೆ.

ಬಿಜಾಪುರ ಡಿಸ್ಟ್ರಿಕ್ಟಿನ ಹರ್ಗುನಾಡ್ ತಾಲ್ಲೂಕಿನ ೧೩ ಹಳ್ಳಿಗಳಲ್ಲಿ ಆಹಾರದ ಅಭಾವವು ಹೆಚ್ಚಾಗಿರುವುದೆಂದು ಬೊಂಬಾಯಿ ಸರ್ಕಾರದವರು ಪ್ರಕಟಿಸಿದ್ದಾರೆ.

ಪಟ್ಟಣದ ಮುಖ್ಯ ಭಾಗಗಳಲ್ಲಿ ಹಂಚಲು ಬಂಗಾಳಾ ಸರ್ಕಾರದವರು ೧೦ ಸಾವಿರ ಸೂರು ವಸ್ತ್ರ ಮತ್ತು ೫ ಸಾವಿರ ಘನ ಅಡಿಯಷ್ಟು ಮರಳನ್ನು ಕೊಟ್ಟಿರುತ್ತಾರೆ.

ಸೂರತ್ತಿನ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡನ್ನು ೬ ತಿಂಗಳ ಕಾಲ ಬೊಂಬಾಯಿ ಸರ್ಕಾರದವರು ರದ್ದುಪಡಿಸಿದ್ದಾರೆ.

ಬನ್ನೂ ಡಿಸ್ಟ್ರಿಕ್ಟಿನ ಇಂದ್ರಿ ಹಳ್ಳಿಯಿಂದ ೫ ಮಂದಿ ಮುಸ್ಲಿಮರನ್ನು ೨ ಒಂಟಿಗಳನ್ನೂ ಹಾರಿಸಿಕೊಂಡು ಹೋಗಲು ಬಂದಿದ್ದ ೩ ಮಂದಿ ಡಕಾಯಿತರ ಪೈಕಿ ಇಬ್ಬರು ಕೊಲ್ಲಲ್ಪಟ್ಟು ಒಬ್ಬನು ಹಿಡಿಸಿಕೊಂಡು ಓಡಿದನು.

ಸಂಸ್ಥಾನದ ಸುದ್ದಿಗಳು

ಮೈಸೂರು ಸರ್ಕಾರಿ ಇಲಾಖೆಗಳಿಗೆ ರಿಯಾಯಿತಿ ದರದಲ್ಲಿ ಕೊಡಲಾಗುತ್ತಿದ್ದ ಎಲೆಕ್ಟ್ರಿಕ್ ಪವರನ್ನು, ಇದೇ ರಿಯಾಯಿತಿ ದರಗಳಲ್ಲಿ ಯುದ್ಧ ಮುಗಿಯುವವರೆಗೂ ಕೊಡಲಾಗುವುದೆಂದು ಸರ್ಕಾರದ ಪ್ರಕಟಣೆಯಿಂದ ತಿಳಿಸುತ್ತದೆ.

ಬೆಂಗಳೂರು ನಗರದಲ್ಲಿರುವ ಎಲ್ಲ ಹೋಟಲುಗಳ ಮಾಲೀಕರುಗಳೂ ತಮ್ಮಲ್ಲಿರುವ ಅಕ್ಕಿ, ಸಕ್ಕರೆ ಎಷ್ಟು ಮಂದಿಯವರ ಬಗ್ಗೆ ಮಾರ್ಚಿ ೩೫ ನೇ ತಾರೀಖಿನೊಳಗೆ ಆಯಾ ಡಿವಿಜನ್ನಿನ ಫುಡ್ ಇನ್‌ಸ್ಪೆಕ್ಟರುಗಳ ಮುಂದೆ ತಿಳಿಸಬೇಕು ಎಂಬ ದಾಗಿ ಬೆಂಗಳೂರು ಪೌರ ಕಮಿಷನರಾದ ವಿ|| ಎ. ಎ. ಖಾಕ್ ರವರು ಆಜ್ಞೆಯಿತ್ತಿದ್ದಾರೆ.

ಹೊಳೀನರಸೀಪುರದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ರಾಗೀ ಬೆಳೆಯನ್ನು ಬೆಳೆಸುವಂತೆ ಜಿಲ್ಲಾಧಿಕಾರಿಗಳು ರೈತರಿಗೆ ಪ್ರೋತ್ಸಾಹ ಕೊಟ್ಟಿದ್ದಾರೆ.

ರೆವಿನ್ಯೂ ಪ್ರೊಬೇಷನರುಗಳಾದ ಶ್ರೀಗಳಾದ ಎಸ್. ಓಬಿಯಲ್ಲಾ, ಹೆಚ್. ಎಲ್. ನಾಗೇಗೌಡ, ಹೆಚ್. ಸುಬ್ಬರಾಯಪ್ಪಯ್ಯನವರುಗಳನ್ನು ಮೈಸೂರು ಜಿಲ್ಲಾ ವರಿಷ್ಠರನ್ನಾಗಿ ನೇಮಿಸಲಾಗಿದೆ.

ವರ್ತಮಾನ

ಫಿರೋಜಪುರ ಡಿಸ್ಟ್ರಿಕ್ಟಿನ ದರ್ಜಾಸಿ ಕಛೇರಿಯಲ್ಲಿ ಜಲಂಧರ ಪೋಲೀಸ್ ಇಲಾಖೆಯವರಿಗೂ ಪೋಲೀಸ್ ದಳದವರಿಗೂ ಹೊಡೆದಾಟ ನಡೆದು ೪ ಮಂದಿ ದಂಗೆಕೋರರು ಕೊಲ್ಲಲ್ಪಟ್ಟರು. ಒಬ್ಬನು ಬಂಧಿಸಲ್ಪಟ್ಟನು. ಈ ಹೊಡೆದಾಟ ಮಾಡಿದ ಪೋಲೀಸ್ ಕಾನ್‌ಸ್ಟೇಬಲ್ಲಿನ ವಿರುದ್ಧ ಕೊಲೆ ಮೊಕದ್ದಮೆಯನ್ನು ಕಳುಹಿಸಲಾಗಿದೆ.

೦ ೦ ೦

ಕೊಯಮ್ಬತ್ತೂರಿನ ಒಬ್ಬ ಪ್ಲೀಡರಾದ ಶ್ರೀ ಕೆ.ವಿ ಸುಬ್ರಹ್ಮಣ್ಯ ಅಯ್ಯರ್ ಎಂಬವರು, ಉಟಕಮಂಡಿನ ಸಬಾರ್ಡಿನೇಟ್ ಜಡ್ಜಿಯವರಿಗೆ ಅಗೌರವಕರವಾಗಿ ಮಾಡಿಕೊಂಡ ಕೋರ್ಟಿನಲ್ಲಿ ಗಲಾಟೆಯುಂಟುಮಾಡಿದರೆಂಬ ಅಪವಾದದ ಮೇಲೆ, ಮದ್ರಾಸ್ ಹೈಕೋರ್ಟಿನವರು ಅವರನ್ನು ೨ ತಿಂಗಳು ಸಸ್ಪೆಂಡ್ ಮಾಡಿದ್ದಾರೆ.

೦ ೦ ೦

ಅತಿಶ್ರೀಮಾನಾದ ಒಂದು ಹೈಸ್ಕೂಲು ಪ್ರೊಪ್ರೇಟರಿಯು ಬೆಂಕಿಗೆ ಆಹುತಿಯಾಯಿತು. ಕಾವಲುಗಾರನು ಎಚ್ಚತ್ತು ಕೂಗಿಕೊಂಡನು. ಫೈರ್ ಎಂಜಿನ್ ಕರೆಸಲ್ಪ

ನಿಮ್ಮ ಊರಿನ ಮೆಚ್ಚಿನ ಚಲನಚಿತ್ರ ಮಂದಿರಗಳಲ್ಲಿ ಎಮರುನೋಡಿ

— ಪೆಚ್ ಆರ್ ಜಿ. ಸಿ. ಯವರ —

ಶ್ರೀ ಪಿಕ್ಚರ್ಸ್

ಗಾಂಧಿಸ್ಕ್ವೇರ್ ಮೈಸೂರು ಇವರ ನಂಗೀತರತ್ನ ಆಸ್ಥಾನ ವಿದ್ವಾನ್ ಟಿ ಚಾಡಯ್ಯನವರಿಂ, ಕಲ್ಚಗ್ಗ್ ಕನ್ನಡಿಯಕೆ ಹಿರಣ್ಣಯ್ಯನವರು ನಿರ್ಮಾಪಕ

ವಾರ್ಲಿ (WARLIST)

ಸೆಂಸೂ ಸಾಹಸ ಚಿತ್ರ

ಅಕ್ಕರ

ಸಾಮಾಜಿಕ ಚಿತ್ರ

ಭಾವಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ ೬ ಆಣೆ ಪೋಸ್ಟೇ. ಒ 1 ಆಣೆ. ಮಂಗಡ ಕಳುಹಿಸಬೇಕು

ಸತ್ಯವಾದಿ ಆಫೀಸು ಮೈಸೂರು

For good printing
Saraswati Printing Press
Lansdowne Buildings, Mysore
Lakshminarasimha Press

ಆಪೆರ — ತಾ|| 18 ರಿಂದ ಶೋಭ

ಶ್ರೀದೇವಿ ಆರ್ಮ್ಸ್

ಅಂದವಾದ ಜೋರ್ಡುಗೋ ಬರೆಯಲ್ಪಡುತ್ತವೆ. ಎಲ್ಲಾ ತರಹದ ಚಿತ್ರಲಿಸಗಳೂ ಮಾಡಲ್ಪಡುತ್ತವೆ ಸುಲಭ ದರಗಳು. 438 ಚಾಮರಾಜರೋಡ್, ಮೈಸೂರು

ಶ್ರೀ ಪರಶುರಾಂ ಹಾಲ್
ಪ್ರೊ|| ಧೊಂಡೋಜಿರಾವ್
ಎಂಡ್ ಸನ್ಸ್
ಸಯ್ಯಾಜಿರಾವ್ ರೋಡು
ಮೈಸೂರು
ನಮ್ಮಲ್ಲಿ ಎಲ್ಲಾ ವಿಧದ ಬಟ್ಟೆಗಳೂ, ಕ್ವಲ್ಟ್‌ಗಳೂ, ಸುಲಭ ಬೆಲೆಗೆ ದೊರೆಯುತ್ತೆ. ಮತ್ತು ಹೊಲಿಗೆ ಕೆಲಸವನ್ನು ನಿಮ್ಮ ಮನ ಒಪ್ಪುವಂತೆ ಅಂದವಾಗಿ ಮಾಡಲಾಗುತ್ತೆ

Edited, Printed & published by M. S. Krishna Rao, at the Satyavadi Press, Chamaraja